# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಮಾನ್ಯ ಸದಸ್ಯರ ಹೆಸರು | : ಶ್ರೀ ಸಿ.ಎನ್. ಮಂಜೇಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : 2257 |
| ಉತ್ತರಿಸಬೇಕಾದ ದಿನಾಂಕ: | : 26.03.2026 |
| ಉತ್ತರಿಸುವ ಸಚಿವರು | : ಗೃಹ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯ ಪೊಲೀಸ್ ಇಲಾಖೆ ಜಾರಿಗೆ ತಂದಿರುವ "ಆಸರೆ" ಯೋಜನೆಯಡಿ ಹಿರಿಯ ನಾಗರೀಕರ ಮನೆಗೆ ಹೋಗಿ ವೈಯಕ್ತಿಕ ಕೆಲಸಗಳನ್ನು (ಕಾಂಪೌಂಡ್ ಸ್ವಚ್ಛತೆ ಇತ್ಯಾದಿ) ಮಾಡುವಂತೆ ಸಿಬ್ಬಂದಿಗಳಿಗೆ ಸೂಚಿಸಿರುವುದಕ್ಕೆ ಆಕ್ಷೇಪ ವ್ಯಕ್ತವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಕರ್ನಾಟಕ ರಾಜ್ಯ ಪೊಲೀಸರು "ಆಸರೆ" ಎಂಬ ವಿನೂತನ ಉಪಕ್ರಮವನ್ನು ರಾಜ್ಯದಲ್ಲಿ ಒಂಟಿಯಾಗಿ ವಾಸಿಸುತ್ತಿರುವ ಮಹಿಳೆಯರಿಗೆ ಮತ್ತು ವಯೋವೃದ್ಧ ಹಿರಿಯ ನಾಗರೀಕರಿಗೆ ಅವರ ಜೀವನದಲ್ಲಿ ಒಂಟಿತನದ ಅಸುರಕ್ಷತೆ, ಅಭದ್ರತೆ ಕಾಡುವಂತೆ ಹಾಗೂ ಅವರ ಬಗ್ಗೆ ಕಾಳಜಿ ವಹಿಸುವ ವಿಶ್ವಾಸ ನೀಡುವಂತಹ ಮತ್ತು ಅವರು ಒಂಟಿಯಲ್ಲ ಅವರೊಂದಿಗೆ ಪೊಲೀಸ್ ಇಲಾಖೆಯು ಕಾನೂನನ್ನು ಜಾರಿಗೊಳಿಸುವುದು ತ್ವರಿತ ಪೊಲೀಸ್ ಪ್ರಕ್ರಿಯೆಯನ್ನು ಸುಗಮಗೊಳಿಸುವುದು ಮತ್ತು ಕುಟುಂಬಗಳು ಸ್ಥಳೀಯ ಸಂಸ್ಥೆಗಳ ಮತ್ತು ಸಾಮಾಜಿಕ ಕಲ್ಯಾಣ ಸಂಸ್ಥೆಗಳೊಂದಿಗೆ ಸಮನ್ವಯತೆ ಸಾಧಿಸುವ ಮೂಲಕ ಕಾನೂನುಬದ್ಧ ಸಹಾನುಭೂತಿಯನ್ನು ಹಿರಿಯ ನಾಗರಿಕರಿಗೆ ಒದಗಿಸಲು ಸ್ಥಾಯಿ ಆದೇಶ ಸಂಖ್ಯೆ: 1053ರಲ್ಲಿ ಸೂಚಿಸಿದ್ದು, ಅದರಂತೆ ಒಂಟಿಯಾಗಿ ವಾಸಿಸುತ್ತಿರುವ ಮಹಿಳೆಯರಿಗೆ ಮತ್ತು ವಯೋವೃದ್ಧ ಹಿರಿಯ ನಾಗರೀಕರ ಸೇವಾ ಕಾರ್ಯ ಮುಂದುವರೆದಿರುತ್ತದೆ. |
| ಆ) | ರಾಜ್ಯದಲ್ಲಿ ಈಗಾಗಲೇ ಸುಮಾರು 30,000ಕ್ಕೂ ಹೆಚ್ಚು ಪೊಲೀಸ್ ಸಿಬ್ಬಂದಿಗಳ ಕೊರತೆ ಇರುವಾಗ, ಸಿಬ್ಬಂದಿಗಳನ್ನು ಇಂತಹ ಕೆಲಸಗಳಿಗೆ ನಿಯೋಜಿಸುವುದರಿಂದ ಕಾನೂನು ಸುವ್ಯವಸ್ಥೆ ಪಾಲನೆಯ ಮೇಲೆ ಪರಿಣಾಮ ಬೀರುವುದಿಲ್ಲವೇ; | ಪೊಲೀಸ್ ಇಲಾಖೆ ಜಾರಿಗೆ ತಂದಿರುವ "ಆಸರೆ" ಉಪ ಕ್ರಮವು ಬೀಟ್ ವ್ಯವಸ್ಥೆಯ ಒಂದು ಭಾಗವಾಗಿರುವುದರಿಂದ ಕಾನೂನು ಸುವ್ಯವಸ್ಥೆ ಪಾಲನೆಯ ಮೇಲೆ ಯಾವುದೇ ತೆರನಾದ ವ್ಯತಿರಿಕ್ತ ಪರಿಣಾಮ ಬೀರುವುದಿಲ್ಲ. |
| ಇ) | ಪೊಲೀಸ್ ಸಿಬ್ಬಂದಿಗಳ ಘನತೆಗೆ ಚ್ಯುತಿ ಬಾರದಂತೆ ಮತ್ತು ಅವರ ಮೇಲಿನ ಕೆಲಸದ ಒತ್ತಡವನ್ನು ಕಡಿಮೆ ಮಾಡಲು ಈ ಯೋಜನೆಯ ಮಾರ್ಗಸೂಚಿಗಳನ್ನು ಮರುಪರಿಶೀಲಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ? | "ಆಸರೆ" ಉಪ ಕ್ರಮವು ಸಮುದಾಯ ಪೊಲೀಸಿಂಗ್‌ನ ಪ್ರಮುಖ ಭಾಗವಾಗಿದ್ದರಿಂದ ಇದರ ಅನುಷ್ಠಾನದ ಕುರಿತು ಮರುಪರಿಶೀಲನೆ ಅಗತ್ಯವಿರುವುದಿಲ್ಲ. |

ಸಂಖ್ಯೆ: ಹೆಚ್ ಡಿ 52 ಕೆಎಎ 2026

(ಡಾ: ಜಿ. ಪರಮೇಶ್ವರ)
ಗೃಹ ಸಚಿವರು